## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.

ಸಿಸಿ ನಂಃ **45/2014**

| | | | | |
|---|---|---|---|---|
| ಹೆಸರು | ಃ ಶಿವ | | ಸಿ.ಡಬ್ಲ್ಯೂ | ಃ 4 |
| ಗಂಡನ ಹೆಸರು | ಃ ಬೋರಯ್ಯ | | ಪಿ.ಡಬ್ಲ್ಯೂ | ಃ 7 |
| ವಯಸ್ಸು | ಃ 44 ವರ್ಷ | | | |
| ಉದ್ಯೋಗ | ಃ ನಿರ್ವಾಹಕ, ಕೆ.ಎಸ್.ಆರ್.ಟಿ.ಸಿ | | | |
| ವಾಸ ಸ್ಥಳ | ಃ ಮಳವಳ್ಳಿ | | | |

ಸಾಕ್ಷಿಗೆ ದಿನಾಂಕಃ 25**.09.2018** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .

2011 ರಿಂದ ಮಳವಳ್ಳಿ ಕೆ ಎಸ್ ಆರ್ ಟಿಸಿ ಡಿಪೋದಲ್ಲಿ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕಃ 10.04.2013 ರಂದು ಕೆಎ-09 ಎಫ್ -3477 ನಂಬರಿನ ಬಸ್ ನಲ್ಲಿ ಬೆಳಕವಾಡಿ-ಮಳವಳ್ಳಿ ರೂಟ್ ನಲ್ಲಿ ಕರ್ತವ್ಯ ನಿರತನಾಗಿದ್ದೆ. ಬೆಳಕವಾಡಿಯಿಂದ ಹೊಸಹಳ್ಳಿ ಕ್ರಾಸ್ ಗೆ ನಮ್ಮ ಬಸ್ ಬಂದಾಗ ನಮ್ಮ ಇಲಾಖೆಯ ತನಿಖಾದಳದ ಅಧಿಕಾರಿಗಳು ಬಸ್ ನ್ನು ನಿಲ್ಲಿಸಿ ಪ್ರಯಾಣಿಕರನ್ನು ಚೆಕ್ ಮಾಡುತ್ತಿದ್ದರು. ಆಗ ಮಧ್ಯಾಹ್ನ ಸುಮಾರು 2.30 ಗಂಟೆ ಆಗಿತ್ತು. ಆ ಸಮಯದಲ್ಲಿ ಒಬ್ಬ ವ್ಯಕ್ತಿ ನಮ್ಮ ಇಲಾಖೆಯ ಸಮವಸ್ತ್ರ ಧರಿಸಿ ಬ್ಯಾಡ್ಜ್ ನ್ನು ಹಾಕಿಕೊಂಡು ಪ್ರಯಾಣಿಸುತ್ತಿದ್ದ. ಟಿಕೇಟ್ ಕೇಳಿದಾಗ ತಾನೂ ಸಹ ಕೆ ಎಸ್ ಆರ್ ಟಿ ಸಿ ಕಂಡಕ್ಟರ್ ಆಗಿದ್ದೇನೆ ಎಂದು ಪಾಸ್ ತೋರಿಸಿದ್ದ. ಆಗ ಇರಬಹುದು ಎಂದು ನಂಬಿಕೆಯಿಂದ ಆ ಪಾಸ್ ನ್ನು ನಾನು ನಿಖರವಾಗಿ ಪರಿಶೀಲಿಸಲಿಲ್ಲ. ತನಿಖಾಧಿಕಾರಿಗಳು ತನಿಖೆ ಮಾಡುವ ಕಾಲಕ್ಕೆ ಆ ವ್ಯಕ್ತಿ ನಮ್ಮ ಇಲಾಖಾ ಸಿಬ್ಬಂದಿಗೆ ನೀಡಲಾಗಿದ್ದ ಉಚಿತ ಪಾಸಿನ ಲ್ಯಾಮಿನೇಟಡ್ ಪಾಸ್ ನ್ನು ಹೇಗೋ ಪಡೆದುಕೊಂಡು, ಅದರಲ್ಲಿದ್ದ ಸಿಬ್ಬಂದಿಯ ಫೋಟೋ ಮತ್ತು ಹೆಸರನ್ನು ಕೆರೆದು ತನ್ನ ಫೋಟೋ ಮತ್ತು ಹೆಸರನ್ನು ಹೆಸರನ್ನು ಹಾಕಿಕೊಂಡು ಬರೆದುಕೊಂಡು ಪ್ರಯಾಣಸಿಸುತ್ತಿದ್ದದ್ದು ಬೆಳಕಿಗೆ ಬಂತು. ಆಗ ತನಿಖಾಧಿಕಾರಿಗಳು ಆ ವ್ಯಕ್ತಿಯನ್ನು ಪಾಸ್ ಸಮೇತ ತಮ್ಮ ವಶಕ್ಕೆ ಪಡೆದುಕೊಂಡರು. ಈ ರೀತಿ ನಕಲಿ ಪಾಸ್ ನ್ನು ಪ್ರಯಾಣಿಸುವ ಮೂಲಕ ನಮ್ಮ ಇಲಾಖೆಗೆ ಆರ್ಥಿಕ ನಷ್ಟವನ್ನು ಉಂಟು ಮಾಡಿರುವರು. ಆ ವ್ಯಕ್ತಿಯ ಬಳಿ ಇದ್ದ ಪಾಸ್ ನ್ನು ಈಗಾಗಲೇ ನಿ.ಪಿ. 3 ಎಂದು ಗುರುತಿಸಲಾಗಿರುತ್ತದೆ.

ಆತನ ಹೆಸರು ಲೋಕೇಶ್ ಎಂದು ಹೇಳಿಕೊಂಡ. ಅವನನ್ನು ನೋಡಿದರೆ ಗುರುತಿಸಬಲ್ಲೆ.

**ಆರೋಪಿ ಪರ ವಕೀಲರು ಹಾಜರಿಲ್ಲದ ಕಾರಣ, ಸಾಕ್ಷಿಯ ಪಾಟೀ ಸವಾಲನ್ನು ದಿನಾಂಕಃ 16.10.2018 ಕ್ಕೆ ಮುಂದೂಡಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.